ಇರಲಾರದು. ಆದರೆ ನಂತರದ ದಿನಗಳಲ್ಲಿ ಜನಪದರಲ್ಲಿ ಮಾತ್ರ ಅಂತಹ ಸಮೃದ್ಧ ಪ್ರೇಮದ ಸಾಲುಗಳು ಹುಟ್ಟಿದರೂ, ಆಧುನಿಕ 'ಸ್ತ್ರೀ ಸಾಹಿತ್ಯ' ತನ್ನದೇ ಒಂದು ಪುರುಷಾರೋಪಿತ ಮರ್ಯಾದೆಯ ಪರಿಧಿಯೊಳಗೆ ಬಂದಿಯಾದದ್ದೂ ನಿಜವೇ. ಕವಿ ಬರೆದಾಗ 'ಆಹಾ ಓಹೋ'ಗಳ ಮಳೆಗರೆದರೆ, ಕವಯತ್ರಿ ಅದೇ ತೀವ್ರ ಸಾಲುಗಳನ್ನು ಬರೆದಾಗ ಬಹಳ 'ಬೋಲ್ಡ್' ಆಗಿ ಬರೆಯುತ್ತಾಳೆ ಅನ್ನುವ ಅನಪೇಕ್ಷಿತ ಪಟ್ಟದ ಆತಂಕಕ್ಕೆ ಒಳಪಟ್ಟದ್ದೂ ನಿಜವೇ. ಅದನ್ನು ಒಡೆಯುವಲ್ಲಿ ಪ್ರಮುಖರಾದ ಕವಯಿತ್ರಿಯರೆಂದರೆ ಪ್ರತಿಭಾ ನಂದಕುಮಾರ (ಅವಳ ಪಾದಗಳ ಕೆಳಗೆ ಬಳ್ಳಿ ಚಿಗುರಿ ನಿತಂಬಗಳಲ್ಲಿ ಡೇರೆ ಅರಳಿದೆ.), ಜ.ನಾ. ತೇಜಶ್ರೀ (ಹಚ್ಚೆಯೊತ್ತಿದ ನೀಲಿಗಾಯಗಳ ಆಳದಲಿ ಮಿನುಗಿದವು ಕನಸ ಮೊಟ್ಟೆಗಳು), ಪಿ. ಚಂದ್ರಿಕ (ಹೊಕ್ಕುಳ ಮೇಲೆ ಒಮ್ಮೆ ಕೈಯಾಡಲೇ, ಅದೆ ಎಲ್ಲಕ್ಕೂ ಮೂಲ) ಮುಂತಾದವರು. ಹೊಸ ಪ್ರತಿಮೆ, ರೂಪಕಗಳಿಂದ, ಹೊಸ ಬಗೆಯ ಅಭಿವ್ಯಕ್ತಿ ಶೈಲಿಯಿಂದ ಇವರ ಕವಿತೆಗಳು ತಮ್ಮ ಅನನ್ಯತೆಯನ್ನು ಸ್ಥಾಪಿಸಿಕೊಂಡಿವೆ. ತೀರಾ ಇತ್ತೀಚಿನ ಪ್ರೇಮ ಮತ್ತು ಕಾಮದ 'ಅತಿತೀವ್ರತೆ'ಯ ಕವಿತೆಗಳಲ್ಲಿ ಕವಯಿತ್ರಿಯರದೇ ಮೇಲುಗೈ ಆಗಿರುವುದನ್ನು ನೋಡಿದಾಗ 'ಹವಾಮಾನ' ಬದಲಾಗಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ.

ಬಹುಶಃ ಬದಲಾದ ಕಾಲಕ್ಕೆ ಭಾವವನ್ನು ಅಭಿವ್ಯಕ್ತಿಸುವ ಬಗೆಯೂ ಅದನ್ನು ಗ್ರಹಿಸುವ ಪರಿಯೂ ಬದಲಾಗುತ್ತಿದೆ ಎನ್ನಬಹುದು. ಈಗಿನ ಕವಿತೆಗಳಲ್ಲಿ ಆಕೃತಿಯ ಕೊರತೆಯ ಹೊರತಾಗಿಯೂ ಭಾವತೀವ್ರತೆಗೆ ಬಡತನವಿಲ್ಲ. ಇಂತಹ ದಿಟ್ಟ ಕವಯಿತ್ರಿಯರ ಒಂದು ದೊಡ್ಡ ದಂಡೇ ಇಂದು ಸನ್ನದ್ಧವಾಗಿ ನಿಂತಿದೆ. ರೇಣುಕಾ ರಮಾನಂದ, ಕಾದಂಬಿನಿ, ಭುವನಾ ಹಿರೇಮಠ, ಚೇತನಾ ತೀರ್ಥಹಳ್ಳಿ, ಕಾವ್ಯ ಕಡಮೆ, ಪ್ರಜ್ಞಾ ಮತ್ತಿಹಳ್ಳಿ, ಪೂರ್ಣಿಮಾ ಸುರೇಶ್, ಆಶಾ ಜಗದೀಶ್, ಸ್ಮಿತಾ ಅಮೃತರಾಜ್, ಸಂಗೀತಾ ರವಿರಾಜ್ ಮುಂತಾದ ಬಹಳಷ್ಟು ಕವಯಿತ್ರಿಯರು ಪ್ರೇಮ ಕಾಮದ ತಲ್ಲಣಗಳನ್ನು ತಮ್ಮ ಸಾಲುಗಳಲ್ಲಿ ಮುಕ್ತವಾಗಿ ಹಿಡಿದಿಟ್ಟು ಕಾವ್ಯಾಸಕ್ತರ ಗಮನಸೆಳೆದಿದ್ದಾರೆ. 'ಅವನನ್ನು ನನ್ನಷ್ಟಕ್ಕೆ ಬಿಟ್ಟುಬಿಡಿ', 'ಪ್ರೇಮವೆಂದರೆ ಅವನನ್ನೇ ಬದುಕುವುದು', 'ಅಕ್ಕನಂತೊಬ್ಬಳು ಅನುರಕ್ತೆ', 'ಉಸಿರಿನ ರುಚಿ ಉಂಡವನೇ', 'ತುಟಿಯ ತುದಿಯಿಂದ ತುಳುಕಿದ ಮುತ್ತುಗಳ ಗುಂಪೊಂದು ಅವನ ಹುಡುಕಿ ಹೊರಟಿವೆ.'

ಇಂತಹ ತೀವ್ರ ಉನ್ಮಾದ ಹೊಮ್ಮಿಸುವ ಸಾಲುಗಳು ಈಗಿನ ಕವಯಿತ್ರಿಯರಿಗೆ ಸಹಜ ಸುಂದರವಾಗಿ ಸಿದ್ಧಿಸಿವೆ. ನವಿರು ತಲ್ಲಣಗಳನ್ನು ಹೊಮ್ಮಿಸಿ, ಕಾಲಿನ ಕಿರುಬೆರಳ ಉಗುರಿಗೂ ಕಾಮ–ಪ್ರೇಮದ ತಹತಹ ತರುವಲ್ಲಿ ಈಕವಿತೆಗಳು ಸಮರ್ಥವಾಗಿವೆ.

ಆದರೆ ಇವೆಲ್ಲವೂ ಓದುಗವಿತೆಗಳು, ತುಸು ವಾಚಾಳಿ ಕವಿತೆಗಳು, ಹಿಂದಿನ ಭಾವಗೀತೆಗಳಂತೆ ನಿಯತಲಯ ಮತ್ತು ಛಂದೋಬದ್ಧತೆಯ ಚೌಕಟ್ಟಿಗೆ ಒದಗದಂಥವು. ಹಳೆಯ ಅದ್ಭುತ ಹಾಡುಗವಿತೆಗಳ ಕೊರತೆ ಕಾವ್ಯಲೋಕವನ್ನು ಕಾಡುತ್ತಿದೆ. ಅದೆಲ್ಲ ಏನೇ ಇದ್ದರೂ ಅಕ್ಷರಲೋಕದಲ್ಲಿ ಕಾವ್ಯ ಉಳಿದಿರುವವರೆಗೆ ಪ್ರೇಮಕವಿತೆಗಳು ಹುಟ್ಟುತ್ತಲೇ ಇರುತ್ತವೆ ಹೊಸಬಗೆಯಲ್ಲಿ, ಹೊಸ ಆಕೃತಿಗಳಲ್ಲಿ, ಹೊಸ ಆಶಯಗಳಲ್ಲಿ ಎಂಬುದಂತೂ ನಿಜ.

ಹಾಸನ ಜಿಲ್ಲೆ ಆಲೂರು ತಾಲ್ಲೂಕಿನ ಹೆದ್ದುರ್ಗ ಗ್ರಾಮದಲ್ಲಿ ವಾಸ. ಜೀವನಕ್ಕೆ ಕಾಫಿ ತೋಟ. ಆಸಕ್ತಿ ಓದು, ಬರವಣಿಗೆ. 'ಅಸ್ಮಿತೆ', 'ಒಳಸೆಲೆ' ಎಂಬ ರಡು ಕವನ ಸಂಗ್ರಹಗಳ ಪ್ರಕಟಣೆ. ಪ್ಲಾಂಟೇಷನ್ ಪತ್ರಿಕೆಗೆ ಸಂದರ್ಶನ ಮತ್ತು ಲೇಖನಗಳನ್ನು ರೂಪಿಸುವುದರಲ್ಲಿ ಆಸಕ್ತಿ.